ಗಂಗಾವತಿ ತಾಲ್ಲೂಕಿನ ಜೂನಿಯರ್ ಕಾಲೇಜಿನಲ್ಲಿ ಪ್ರಯೋಗಾಲಯಂ. ಪೀಠೋಪಕರಣಗಳಂ ಮಂತ್ರಿ ಬೌದ್ಧಿಕ ಶಾಸ್ತ್ರದ ಉಪನ್ಯಾಸಕರಿಲ್ಲದಿರುವುದು

೨೦೫೩. ಶ್ರೀ ಶ್ರೀರಂಗದೇವರಾಯಲು(ಕನಕಗಿರಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗಂಗಾವತಿ ತಾಲ್ಲೂಕಿನ ಜೂನಿಯರ್ ಕಾಲೇಜಿನಲ್ಲಿ ಪ್ರಯೋಗಾಲಯ, ಪೀಠೋಪಕರಣಗಳು ಮತ್ತು ಬೌದ್ಧಿಕ ಶಾಸ್ತ್ರದ ಉಪನ್ಯಾಸಕರು ಇಲ್ಲದೆ ವಿದ್ಯಾರ್ಥಿಗಳಿಗೆ ತೊಂದರೆ ಆಗಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ೧೯೮೬-೮೭ನೇ ಸಾಲಿನಲ್ಲಿ ಪ್ರಯೋಗಾಲಯಕ್ಕೆ ಅಗತ್ಯ ವಸ್ತು ಉಪಕರಣಗಳನ್ನು ಕೊಳ್ಳಲು ರೂ. ೩೦೦೦-೦೦ ಬಿಡುಗಡೆ ಮಾಡಿದೆ. ಬೌದ್ಧಿಕ ಉಪನ್ಯಾಸಕರ ಆಯ್ಕೆ ಆಗಿದ್ದು ಅವರ ನೇಮಕಾತಿಯು ಈಗ ಸರ್ಕಾರದ ಪರಿಶೀಲನೆಯಲ್ಲಿದೆ.

ಕೇಂದ್ರ ಸರಕಾರದಿಂದ ಹಿಂದಿ ಪ್ರಾಥಮಿಕ ಶಿಕ್ಷಕರನ್ನು ನೇಮಿಸುವುದರ ಬಗ್ಗೆ

೨೦೧೩. ಶ್ರೀ ಬಿ. ಎ. ಉಪ್ಪಿನ. (ಕುಂದಗೋಳ್).— ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೇಂದ್ರ ಸರ್ಕಾರದಿಂದ ಪ್ರಾಥಮಿಕ ಶಾಲೆಗಳಲ್ಲಿ ಒಂದು ಸಾವಿರ ಹಿಂದೀ ಶಿಕ್ಷಕರನ್ನು ನೇಮಿಸಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಸಹಾಯಧನ ಬಂದಿರುವುದು ನಿಜವೇ ?

ಆ) ಹಾಗಾದಲ್ಲಿ ಆ ಹಿಂದೀ ಶಿಕ್ಷಕರನ್ನು ನೇಮಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಹೌದು.

ಆ) ಪ್ರಾಥಮಿಕ ಶಾಲಾ ಶಿಕ್ಷಕರನ್ನು ಈಗಾಗಲೇ ನೇಮಕ ಮಾಡಲು ಜಿಲ್ಲಾ ನೇಮಕಾತಿ ಸಮಿತಿಗಳನ್ನು ರಚಿಸಲಾಗಿದೆ. ಸದರೀ ಸಮಿತಿಗೆ ಈಗಾಗಲೇ ಹಿಂದಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲು ಸೂಕ್ತ ನಿರ್ದೇಶನ ನೀಡಲಾಗಿದೆ.

ಹರಪನಹಳ್ಳಿಯಲ್ಲಿರುವ ತಾಂಡಗಳಿಗೆ ಶಾಲೆಗಳ ಮಂಜೂರಿ

೨೦೧೪. ಶ್ರೀ ಬಿ. ಹೆಚ್. ಯೆಂಕಾನಾಯಕ್ (ಹರಪನಹಳ್ಳಿ).— ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಬಳ್ಳಾರಿ ಜಿಲ್ಲೆಯ ಹರಪನಹಳ್ಳಿಯಲ್ಲಿರುವ ತಾಂಡಗಳು ಮತ್ತು ಹರಿಜನ ಪಟ್ಟಿಗಳು ಎಷ್ಟು ?

೨. ಆ ಪೈಕಿ ಶಾಲೆಗಳಿರುವ ತಾಂಡ ಮತ್ತು ಪಟ್ಟಿಗಳೆಷ್ಟು ?

೩. ಅವುಗಳಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿರುವ ಶಾಲೆಗಳೆಷ್ಟು ?